# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ | ಫಾಲ್ಗುನ | ಫೆಬ್ರವರಿ ೨೦೧೦ | ಸಂಪುಟ-೪ | ಸಂಚಿಕೆ-೨


**ಗುರುವಾಣಿ**

## ಪರಿಮಾಣಾಧಾರಿತ ಬದುಕಿನಿಂದ ಗುಣಮಟ್ಟಾಧಾರಿತ ಬದುಕಿನ ಕಡೆಗೆ ಸಾಗುವಲ್ಲಿ



### ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ಹಾಗೂ ಮಾಲೂರಿನ ಕಾರ್ಖಾನೆಯ ಪಾತ್ರ

ತಂಪಾಯಿತು. ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಮಳೆಯು ದೇಶಾದ್ಯಂತ ಎಡೆಬಿಡದೇ ಧಾರಾಕಾರವಾಗಿ ಸುರಿಯಿತು. ಯಾತ್ರೆಯ ಆರಂಭ ಮಂಗಳ, ಸಮಾರೋಪ ಎರಡೂ ಆ ಮಳೆಯ ಮಹತ್ತರ ಮೈಲುಗಲ್ಲುಗಳು. ಸಮಾರೋಪ ಮುಂದಿನ ಮೆಟ್ಟಿಲಿಗೆ ಸೋಪಾನ.

ಅಂದರೆ, ಯಾತ್ರೆಯಲ್ಲಿ ದೇಶಾದ್ಯಂತ ಜನಜಾಗರಣದ ಕಾರ್ಯ ಕೈಗೊಂಡೆವು. ನಂತರದಲ್ಲಿ ಸಮಸ್ತರ ನಿರೀಕ್ಷೆ, ಸಾಮಾನ್ಯನ ಹೊಟ್ಟೆ-ಬಟ್ಟೆ ಕಟ್ಟಿಕೊಡುವಲ್ಲಿ ಗೋವು ಎಂತಹ ಮಹತ್ತರ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದೇ ಆಗಿದೆ.

ಈ ಮಾತನ್ನು ಮತ್ತೆ ಮತ್ತೆ ಒತ್ತಿ ಹೇಳಲು ಕಾರಣ ಇಷ್ಟೇ. ಮಧ್ಯದಲ್ಲಿ ದಾರಿ ತಪ್ಪುವ ಸಾಧ್ಯತೆಗಳು ಹೆಚ್ಚು. ಮುನ್ನಡೆಯುವ ಮಾರ್ಗದಲ್ಲಿ ದಯೆ, ಲಾಭದ ಜಾಗದಲ್ಲಿ ದೇಣಿಗೆ ಬಂದು ಕೂತು ಬಿಡುತ್ತವೆ.

ಸಾಮಾನ್ಯವಾಗಿ ಹೇಳುವುದುಂಟು. ನಗರವಾಸಿಗಳಾಗಿದ್ದು ಗೋಪಾಲನೆ ಮಾಡಲಾಗದಿದ್ದಲ್ಲಿ ಗೋಶಾಲೆಗಳಿಗೆ ದೇಣಿಗೆ ಕೊಡಿ, ನಿಮ್ಮ ರೊಟ್ಟಿಯಲ್ಲಿ ಒಂದು ಪಾಲಿರಲಿ ಇತ್ಯಾದಿ, ಇತ್ಯಾದಿ.

ಈ ಎಲ್ಲ ಮಾತುಗಳು ಒಂದು ವಿಷಯದ ಬಗೆಗೆ ಶ್ರದ್ಧೆ, ಭಕ್ತಿ ಹುಟ್ಟಿಸಲು ಸಾಕಷ್ಟು ಸರಕನ್ನು ಒದಗಿಸುತ್ತವೆ. ಆದರೆ ನಮ್ಮ ನಿರೀಕ್ಷೆ ಇವೆಲ್ಲನ್ನು ಮೀರಿದ್ದಾಗಿರಬೇಕಲ್ಲವೇ? ಈ ದಯೆ, ದೇಣಿಯ ಗೋಸೇವಾ ಕಾರ್ಯ ಹೆಚ್ಚೆಂದರೆ ಕೆಲವಾರು ವರುಷಗಳವರೆಗೆ ನಡೆಯಬಹುದು. ಅದೂ ಏನು ದಯನೀಯ ಸ್ಥಿತಿಯಲ್ಲಿ ಕೂರಿಸಿ ಅನ್ನ ಹಾಕಿದ ಮಾದರಿಯಲ್ಲಿ ನಡೆಯುತ್ತದೆ.

ನಮಗೆ ಬೇಕಿರುವುದು ಹಾಗಲ್ಲ. ರಾಜಾರೋಷದ ಬದುಕು. ಹಾಗಾಗಬೇಕಾದಲ್ಲಿ ಗೋವು ರೈತನ ಮನೆಯ ಅಮೂಲ್ಯ ಸಂಪತ್ತಾಗಬೇಕು. ಅದಕ್ಕೆ ದಯೆಯ ಜಾಗದಲ್ಲಿ ಧೈರ್ಯದ ದಾರಿ, ದೇಣಿಗೆಯ ಜಾಗದಲ್ಲಿ ಲಾಭದ ಸರಣಿ ಬಂದು ಪವಡಿಸಬೇಕು. ಅಂತಹ ಕಾರ್ಯ ಕಾಲ-ಕಾಲಗಳವರೆಗೆ ಧೀಮಂತ ಬದುಕನ್ನು ಸಾಗಿಸುವ ತಾಕತ್ತನ್ನು ಹೊಂದಿರುತ್ತದೆ. ಏಕೆಂದರೆ ಆ ಸಂದರ್ಭದಲ್ಲಿ ಗೋವು ತನ್ನ ಕಾಲ ಮೇಲೆ ತಾನು ನಿಲ್ಲಲು ಶಕ್ತವಾಗಿರುತ್ತದೆ.

ಅಂತಹದೊಂದು ನಡೆಗೆ ಗೋವು ಆರ್ಥಿಕವಾಗಿ ಲಾಭದಾಯಕವಾಗಬೇಕು. ಅಲ್ಲಿ ಹಾಲಿಗೊಂದೇ ಮೌಲ್ಯ ಸಿಕ್ಕರೆ ಸಾಲದು. ಗೋಮೂತ್ರ, ಗೋಮಯ, ಗಾಡಿ ಎಳೆಯುವ ಸಾಮರ್ಥ್ಯ, ಉಳುವ ಸಾಮರ್ಥ್ಯ ಮಾರುಕಟ್ಟೆಯಲ್ಲಿ ನಿರಾತಂಕವಾಗಿ

**ಹೂರಣ**


ಗುರುವಾಣಿ
ಪ್ರಶ್ನೋತ್ತರ
ಮಾಸದ ಗೋವು: ಅಂಬ್ಲಾಚೆರಿ
ರಾಷ್ಟ್ರಪತಿಗಳಿಗೆ ಎಂಟು ಕೋಟಿ ಹಸ್ತಾಕ್ಷರ ಸಮರ್ಪಣೆ
ಗವ್ಯೋತ್ಪನ್ನ ಘಟಕಕ್ಕೆ ಚಾಲನೆ
ಗೋಗೀತೆ



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW

ಅಂತರಜಾಲ ತಾಣ: vishwagou.org, gougram.org

ಸಂಪರ್ಕ: govishva@gmail.com




ಬಿಕರಿಯಾಗುವಂತಿರಬೇಕು. ಅತಿಶಯ ನಿರೀಕ್ಷೆಯೆಂದರೆ ಈಗಿನ ಮೊಬೈಲ್ ಮಾರುಕಟ್ಟೆಯಂತೆ. ಈಗಿನ ಮಾತು–ಮಾತಿಗೂ ಹೇಗೆ ಮೊಬೈಲ್ ಬೇಕೋ ಹಾಗೆ.

ಅಂತಹದೊಂದು ಪ್ರಯತ್ನಕ್ಕೆ ಶ್ರೀಮಠ ಹಲವಾರು ವರುಷಗಳಿಂದ ಅಡಿಯಿಟ್ಟಿದೆ. ಯಾತ್ರೆ ಸಮಾರೋಪಗೊಂಡ ನಾಲ್ಕಾರು ದಿನಗಳಲ್ಲಿ, ಶ್ರೀಮಠದ ಮಾಲೂರಿನ ಗೋಶಾಲೆಯಲ್ಲಿ ಗೋ ಆಧಾರಿತ ಕಾರ್ಖಾನೆಯ ಶುಭಾರಂಭದೊಂದಿಗೆ, ಆ ಹೆಜ್ಜೆಯನ್ನು ಮತ್ತಷ್ಟು ಸುದೃಢವಾಗಿ ಮುಂದಿಡಲಾಗಿದೆ.

ಈ ಪುಟ್ಟ ಹೆಜ್ಜೆ ಬರುವ ದಿನಗಳಲ್ಲಿ ದೇಶವ್ಯಾಪಿ ತ್ರಿವಿಕ್ರಮ ಸ್ವರೂಪದಲ್ಲಿ ಬೆಳೆದು, ನಮ್ಮಗಳ ಪರಿಮಾಣಾಧಾರಿತ ಬದುಕನ್ನು ಗುಣಮಟ್ಟದ ಆಧಾರದಲ್ಲಿ ನೆಲೆನಿಲ್ಲಿಸಲು ಆ ಗೋಮಾತೆ ಸದಾ ನಮ್ಮೊಡನೆ ಇರಲಿ ಎಂದು ಪ್ರಾರ್ಥಿಸುತ್ತೇವೆ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

# ಪ್ರಶ್ನೋತ್ತರ

ಪ್ರಶ್ನೆ: ವೆಚ್ಚೂರು ಗೋ ತಳಿ ಕಣ್ಮರೆಯಾಗಿದೆಯೇ ?

ಉ: ಆ ಹಂತ ತಲುಪಿತ್ತು. ದೇಶದ ಎಲ್ಲೆಡೆ ಇದ್ದಂತೆ 60ರ ದಶಕದಲ್ಲಿ ಹೋರಿಗಳ ವೀರ್ಯದಿಂದ ಕೇರಳದ ದೇಸೀ ಹಸುಗಳಿಗೆ ಕೃತಕ ಗರ್ಭದಾನ ಮಾಡಿಸುವ ಕಾರ್ಯಕ್ರಮವನ್ನು ಕೇರಳ ಸರಕಾರ ಅತಿ ಉತ್ಸಾಹದಿಂದ ಕೈಗೊಂಡಿತ್ತು. ಕೇರಳ ಜಾನುವಾರು ಕಾಯಿದೆ 1961, ದೇಸೀ ತಳಿ ಹೋರಿಗಳನ್ನು ಇಟ್ಟುಕೊಳ್ಳುವುದು ನಿಷೇಧಿಸಿತ್ತು. ದೇವಸ್ಥಾನದ ಹೋರಿಗಳಿಗೆ ಮಾತ್ರ ವಿನಾಯತಿ ನೀಡಲಾಗಿತ್ತು. ಇಂಥ ಉಗ್ರ ಕ್ರಮದಿಂದಾಗಿ ಕೇರಳದಲ್ಲಿ ವೆಚ್ಚೂರು ಗೋ ತಳಿ ಸಂಪೂರ್ಣ ಕಣ್ಮರೆಯಾಯಿತು. ತ್ರಿಚೂರಿನ ಕೇರಳ ಕೃಷಿ ವಿಶ್ವವಿದ್ಯಾಲಯದ ಕೆಲವು ಯುವ ಸಂಶೋಧಕರ ಪ್ರಯತ್ನದಿಂದ ಉಳಿದಿದ್ದ ಕೆಲವೇ ವೆಚ್ಚೂರು ತಳಿ ಹಸುಗಳು ಮತ್ತು ಹೋರಿಗಳನ್ನು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಸಂರಕ್ಷಿಸಲಾಗುತ್ತಿದೆ.

ಪ್ರಶ್ನೆ: ವೆಚ್ಚೂರು ಗೋ ತಳಿ ವಿವಾದ ಏನದು ?

ವೆಚ್ಚೂರು ತಳಿ ಹಸುಗಳು ಸಾಮಾನ್ಯವಾಗಿ ದಿನಕ್ಕೆ 2 ರಿಂದ 3 ಲೀಟರ್ ಹಾಲು ಕೊಡುತ್ತವೆ. ಇವುಗಳ ಹಾಲಿನಲ್ಲಿ ಕೊಬ್ಬಿನ ಅಂಶ ಇತರೇ ಯಾವುದೇ ತಳಿಗಳಿಗಿಂತ ಅತ್ಯಧಿಕವಾಗಿರುತ್ತದೆ. ಇದಕ್ಕೆ ಕಾರಣವಾದ ವೆಚ್ಚೂರು ಗೋವುಗಳ ವಂಶವಾಹಿಗಳನ್ನು ಸ್ಕಾಟ್ಲೆಂಡಿನ ರೋಸಲಿನ್ ಇನ್ಸ್ಟಿಟ್ಯೂಟ್ ಎಂಬ ವಂಶವಾಹಿ ಸಂಶೋಧನಾ ಸಂಸ್ಥೆಯು ಕಳ್ಳ ಮಾರ್ಗದಲ್ಲಿ ಪಡೆದುಕೊಂಡು ಅದನ್ನು ಪೇಟೆಂಟ್ ಮಾಡಿಕೊಂಡುಬಿಟ್ಟಿದೆ ಎಂಬ ಸುದ್ದಿ ಕಾಡ್ಗಿಚ್ಚಿನಂತೆ ಹರಡಿತು. ಡಾಲಿ ಎಂಬ ಹೆಸರಿನ ಕುರಿಯನ್ನು ಪ್ರಥಮ ಬಾರಿಗೆ ಕೃತಕ ವಿಧಾನದಿಂದ ಸೃಷ್ಟಿಸಿದ್ದೇ ಈ ರೋಸಲಿನ್ ಸಂಶೋಧನಾ ಸಂಸ್ಥೆ. ಕೇರಳ ಕೃಷಿ ವಿಶ್ವವಿದ್ಯಾಲಯವು ಈ ಆಪಾದನೆಯನ್ನು ಪ್ರಬಲವಾಗಿ ತಿರಸ್ಕರಿಸಿತು.

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 29ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

ಮಾಸದ ಗೋವು

# ಅಂಬ್ಲಾಚೇರಿ

**ತಮಿಳುನಾಡಿನ ಒಂದು ಉತ್ತಮ ತಳಿ ಅಂಬ್ಲಾಚೆರಿ ಈ ತಿಂಗಳ ಮಾಸದ ಗೋವು. ಉತ್ತಮ ಕೆಲಸಗಾರ ತಳಿ ಇದು. ಎರಡೂವರೆ ಟನ್ನುಗಳಷ್ಟು ಭಾರ ಎಳೆಯಬಲ್ಲವು**

’ಈ ತಳಿಯ ಭಾರ ಎಳೆಯುವ ಸಾಮರ್ಥ್ಯ ಬರೋಬ್ಬರಿ ಎರೆಡೂವರೆ ಟನ್ನುಗಳು! ದುಡಿಯುವ ಸಾಮರ್ಥ್ಯ ಎಂಥಾ ಬಿರುಬಿಸಿಲಿನಲ್ಲೂ ಸತತ 7 ಗಂಟೆ ಬಿಡುವಿಲ್ಲದೆ! ಆಹಾರ 7–8 ಕಟ್ಟು ಬೈಹುಲ್ಲು ಆಚೀಚೆ ಅಷ್ಟೆ!’



ಅಂಬ್ಲಾಚೆರಿ, ತಮಿಳುನಾಡು

‘ತುಂಬ ರೈತೋಪಯೋಗಿ ತಳಿ ಇದು. ಅಸದೃಶ ದೈಹಿಕಸಾಮರ್ಥ್ಯವಿರುವ ಅತಿ ಕಡಿಮೆ ನಿರ್ವಹಣಾ ವೆಚ್ಚವಿರುವ, ಟ್ರಾಕ್ಟರ್, ಟಿಲ್ಲರ್‌ಗಳಂತೆ ಮಾಲಿನ್ಯ ಮಾಡದ, ಬದಲಾಗಿ ಉಳುವ ಭೂಮಿಯನ್ನು, ಗೋಮೂತ್ರ, ಗೋಮಯಗಳಿಂದ ಅಮೃತಸಿಂಚನಗೈಯ್ಯುವ ತಳಿ ಮನೆಮನೆಗಳಲ್ಲಿರಬೇಕಿತ್ತಲ್ಲವೆ?’

‘ಇದು ಭಾರತ ಸ್ವಾಮಿ!!!’

ಈ ಬಾರಿ ನಾನು ಹೇಳಹೊರಟಿರುವುದು ‘ಅಂಬ್ಲಾಚೆರಿ’





ತಳಿಯ ಕುರಿತಾಗಿ. ತಮಿಳುನಾಡಿನ ತಂಜಾವೂರು ಪಕ್ಕದ ಅಂಬ್ಲಚೆರಿ ಗ್ರಾಮ ಇದರ ತವರೂರು. ಮೊಟ್ಟೈ ಮಡು, ಮೊಲೈ ಮಡು ಎಂಬ ಹೆಸರುಗಳೂ ಇವೆ. ಬಣ್ಣ ಕೆಂಪು ಅಥವಾ ಕಂದು. ಹುಟ್ಟುವಾಗ ಕೆಂಪಾಗಿದ್ದ ಕರು ಮೂರು ನಾಲ್ಕು ತಿಂಗಳ



**ಮೂಲ : ತಂಜಾವೂರು, ತಿರವಾವೂರು, ನಾಗಪಟ್ಟಣಂ ಜಿಲ್ಲೆಗಳು – ತಮಿಳುನಾಡು**
**ವಿಭಾಗ : ಕೆಲಸಗಾರ ತಳಿ.**
**ಕಂಗಯಂ ತಳಿಯಿಂದ ಬೆಳವಣಿಗೆ ಹೊಂದಿದ ತಳಿ.**
**ಅತ್ಯುತ್ತಮ ಕೆಲಸಗಾರ ತಳಿ.**
**ವಿಶೇಷತೆಗಳು :**
**ಬಣ್ಣ : ದನಗಳು – ಬೂದು ಬಣ್ಣದಲ್ಲಿ ಬಿಳಿ ಬಣ್ಣ (ಮುಖ ಹಾಗೂ ಕಾಲುಗಳಲ್ಲಿ).**
**ಹೋರಿ – ಕಡು ಬೂದು, ಮುಖ, ಬೆನ್ನು ಹಿಂಬಾಗ – ಕಪ್ಪು ಇರುತ್ತದೆ.**
**ಮೂತಿ : ಕಪ್ಪು**
**ಕಣ್ಣು : ಕಪ್ಪು ಕಣ್ಣು ರೆಪ್ಪೆಗಳು ಇರುತ್ತವೆ.**

ನಂತರ ಬೂದು ಬಣ್ಣಕ್ಕೆ ತಿರುಗುವುದೂ ಇದೆ. ಮೈ ತುಂಬ ಹರಡಿರುವ ಬಿಳಿಪಟ್ಟೆಗಳು ಅಂಬ್ಲಾಚೆರಿಯ ಗುರುತು ಎನ್ನಬಹುದೇನೊ.

ಕಂಗಯಂ ತಳಿಯಿಂದ ಬೆಳವಣಿಗೆ ಹೊಂದಿದ ತಳಿ ಇದು. ಅದ್ಭುತ ದೈಹಿಕ ಶಕ್ತಿಗೆ ಇವು ಪ್ರಖ್ಯಾತ. ಗಟ್ಟಿ ಕೆಸರಿನಿಂದ ತುಂಬಿದ ಗದ್ದೆಯನ್ನು ಆರಾಮವಾಗಿ ಉಳಬಲ್ಲವು. 2–2.2 ಟನ್ನು ತೂಕದ ಗಾಡಿಯನ್ನು ಸುಮಾರು 20 ಕಿ.ಮೀ.ಗಳಷ್ಟು ದೂರವನ್ನು 7 ಗಂಟೆಗಳಷ್ಟು ಕಾಲ ಎಳೆಯಬಲ್ಲವು ಇವು ಅಂದರೆ ಇವುಗಳ ಶಕ್ತಿಯ ಪರಿಚಯ ಆಗಬಹುದು.

ತಮಿಳುನಾಡಿನಲ್ಲಿ ಈ ಗೋವುಗಳ ಕಿವಿಯನ್ನು ಅರ್ಧದಷ್ಟು ಕತ್ತರಿಸುತ್ತಾರೆ. ಹಣೆಯ ಮಧ್ಯದಲ್ಲಿ ಬೆಂಕಿಯಿಂದ ಸುಟ್ಟು ನಾಮದಂತೆ ಮಾಡುತ್ತಾರೆ.

ಇತರೆ ಭಾರತೀಯ ತಳಿಗಳಂತೆ ಇವುಗಳ ಸಂಖ್ಯೆ ಕೂಡ ಕ್ಷೀಣಿಸುತ್ತಿದೆ. 1998ರಲ್ಲಿ ಇವುಗಳ ಸಂಖ್ಯೆ ಸುಮಾರು 2.83



ಲಕ್ಷಗಳಷ್ಟಿತ್ತು. ಇವುಗಳ ಸಂತತಿ ನಾಶವಾಗಬಾರದೆಂದು ತಮಿಳುನಾಡಿನಲ್ಲಿ ಸಂಸ್ಥೆಯೊಂದನ್ನು ಕಟ್ಟಿಕೊಂಡು ಇದನ್ನು ಬೆಳೆಸುತ್ತಿದ್ದಾರೆ.

**– ಮಧುಕೇಶ ದೊಡ್ಡೇರಿ**

# ರಾಷ್ಟ್ರಪತಿಗಳಿಗೆ ಎಂಟು ಕೋಟಿ ಹಸ್ತಾಕ್ಷರ ಸಮರ್ಪಣೆ



ವಿಶ್ವಮಂಗಳ ಗೋ ಗ್ರಾಮಯಾತ್ರೆಯ ಅಂಗವಾಗಿ, ಗೋ ಹತ್ಯೆ ನಿಷೇಧಕ್ಕೆ ಬೆಂಬಲ ಸೂಚಿಸಿ ಸಂಗ್ರಹಿಸಲಾದ ಎಂಟು ಕೋಟಿ ಮುವತ್ತಾರು ಲಕ್ಷಕ್ಕೂ ಮೀರಿದ ಹಸ್ತಾಕ್ಷರಗಳನ್ನು ರಾಷ್ಟ್ರಪತಿಗಳಿಗೆ ಜನವರಿ 31ರಂದು ಸಮರ್ಪಿಸಲಾಯಿತು. ಯೋಗ ಗುರು ರಾಮ್‌ದೇವ್, ಪೇಜಾವರಮಠದ ವಿಶ್ವೇಶ ತೀರ್ಥರು, ಆರ್.ಎಸ್.ಎಸ್‌ನ ನಿಕಟಪೂರ್ವ ಸರಸಂಘಚಾಲಕ ಕೆ.ಎಸ್. ಸುದರ್ಶನ್, ಸಾಧ್ವೀ ಋತಂಭರಾ, ಸಿ.ಬಿ.ಐ.ನ ಮಾಜಿ ನಿರ್ದೇಶಕ ಜೋಗಿಂದರ್ ಸಿಂಗ್ ಅಲ್ಲದೇ ಸಿಖ್, ಇಸ್ಲಾಂ, ಬುದ್ಧ ಹಾಗು ಕ್ರೈಸ್ತ ಮತಗಳ ಧರ್ಮಗುರುಗಳು, ವಿಜ್ಞಾನಿಗಳು, ರೈತರು ಸೇರಿದ 18 ಜನರ ನಿಯೋಗವು ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರ ನೇತೃತ್ವದಲ್ಲಿ ರಾಷ್ಟ್ರಪತಿಗಳನ್ನು ಭೇಟಿ ಮಾಡಿ, ಸಂಪೂರ್ಣ ಗೋ ಹತ್ಯಾ ನಿಷೇಧಕ್ಕಾಗಿ ಆಗ್ರಹಿಸಿತು.

ಈ ಸಮಯದಲ್ಲಿ ರಾಷ್ಟ್ರಪತಿಗಳಿಗೆ ಮನವಿ ಪತ್ರವೊಂದನ್ನು ನೀಡಲಾಗಿದ್ದು, ಪತ್ರದಲ್ಲಿ ಭಾರತೀಯ ಗೋ ತಳಿಗಳ ಮಹತ್ವವನ್ನು ವಿವರಿಸಿ, ಕಸಾಯಿ ಖಾನೆಗಳ ನಿಷೇಧ, ಗೋವನ್ನು ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಗುರುತಿಸುವುದು, ಭಾರತೀಯ ಗೋ ವಂಶದ ಕುರಿತಾದ ಸಂಶೋಧನೆ, ಸಂರಕ್ಷಣೆ, ಸಂವರ್ಧನೆಗೆ ಅಗತ್ಯ ಕ್ರಮ, ಗೋ ಮಾಳಗಳ ರಕ್ಷಣೆ, ನೈಸರ್ಗಿಕ ಕೃಷಿಗೆ ಒತ್ತು ಸೇರಿದಂತೆ ಗೋ ರಕ್ಷಣೆಗೆ, ತನ್ಮೂಲಕ ದೇಶದ ಸ್ವಾಸ್ಥ್ಯಕ್ಕೆ ಅತ್ಯಾವಶ್ಯವಾದ 6 ಮುಖ್ಯ ಅಂಶಗಳನ್ನು ಉಲ್ಲೇಖಿಸಲಾಗಿತ್ತು. ಅದಕ್ಕೂ ಮುನ್ನ ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆದ ಸಮಾರಂಭಕ್ಕೆ ದೇಶದೆಲ್ಲೆಡೆಯಿಂದ 35 ಸಾವಿರಕ್ಕೂ ಹೆಚ್ಚಿನ ಗೋಭಕ್ತರು ಆಗಮಿಸಿದ್ದರು.

# ಗವ್ಯೋತ್ಪನ್ನ ಘಟಕಕ್ಕೆ ಚಾಲನೆ

ಜನವರಿ 21 ಭಾರತೀಯ ಗೋ ಪರ ಚಳುವಳಿಯಲ್ಲೊಂದು ಮಹತ್ವದ ದಿನ. ಭಾರತೀಯರ ಭಕ್ತಿ-ಶ್ರದ್ಧಾಕೇಂದ್ರ ಗೋವು ಆರ್ಥಿಕವಾಗಿಯೂ ಬಡರೈತನ ಬೆನ್ನೆಲುಬಾದಿತೆಂಬ ಸಂಗತಿಯನ್ನು ಪ್ರಯೋಗಾತ್ಮಕವಾಗಿ ಸಾಧಿಸಿತೋರಿಸಲು ಮೊದಲು ಮಾಡಿದ ದಿನ. ಅಂದು ಪರಮಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಆಶಯದಂತೆ ಹಾಗೂ ಶ್ರೀಗಳ ಮಾರ್ಗದರ್ಶನದಲ್ಲಿ ಶ್ರೀ ರಾಮಚಂದ್ರಾಪುರ ಮಠದ ಕಾಮದುಘಾ ಯೋಜನೆಯಡಿ,ಗೋ ಭಕ್ತ ಉದ್ಯಮಿಗಳ ಮತ್ತು ತಾಂತ್ರಿಕ ತಜ್ಞರ ಸಹಕಾರದೊಡನೆ **ಮಾ ಗೋ ಪ್ರೋಡಕ್ಟ್ಸ್ ಪ್ರೈ**.ಲಿ. ಎಂಬ ಗೋ ಆಧಾರಿತ ಉದ್ಯಮವನ್ನು ಪರಮಪೂಜ್ಯರು ಲೋಕಾರ್ಪಣ ಮಾಡಿದರು.

ಮಾಲೂರಿನ ಶ್ರೀ ರಾಘವೇಂದ್ರ ಗೋ ಶಾಲೆಯ ಆವರಣದಲ್ಲಿ ಈ ಘಟಕ ಅಂದಾಜು 2 ಲಕ್ಷ ರೂ.ಭಂಡವಾಳದೊಡನೆ ನಿರ್ಮಾಣಗೊಂಡಿದೆ.ಗೋ ಆಧಾರಿತ ಔಷಧಿಗಳು,ಪ್ರಸಾಧನ ಸಾಮಗ್ರಿಗಳು,ದಿನಬಳಕೆಯ ವಸ್ತುಗಳು,ಕೀಟ ನಿಯಂತ್ರಕಗಳು, ಗೋಬರ್ ಅನಿಲ, ಮಿಥೇನ್ ಅನಿಲ, ಸಾವಯವ ಗೊಬ್ಬರ ಮುಂತಾದ ಗವ್ಯೋತ್ಪನ್ನಗಳನ್ನು ಉತ್ತಮ ಗುಣಮಟ್ಟದಲ್ಲಿ ಉತ್ಪಾದಿಸಿ ಕೃಷಿಕರ ನೆರವಿಗೆ ಬರುವುದು ಈ ಯೋಜನೆಯ ಉದ್ದೇಶ.

ಮಾ ಗೋ ಪ್ರಾಡಕ್ಟ್ಸ್ ಕಂಪೆನಿಯ ನಿರ್ದೇಶಕರಲ್ಲೊಬ್ಬರಾದ ಎಂ.ಕೆ. ಜನಾರ್ಧನ್ ತಮ್ಮ ಪ್ರಾಸ್ತಾವಿಕದಲ್ಲಿ, ಇಂದು ಜನರು ಗೋಮೂತ್ರದ ವೈಜ್ಞಾನಿಕ ಉಪಯೋಗಗಳ ಕುರಿತಾಗಿ ನಂಬದ ಸ್ಥಿತಿಯಲ್ಲಿದ್ದಾರೆ. ಗೋ ಮೂತ್ರ, ಗೋಮಯದ ಉಪಯುಕ್ತತೆ ಹಾಗು ರೈತರ ಸಬಲೀಕರಣ ಗೋ ಆಧಾರಿತ ಬದುಕಿಂದ ಸಾಧ್ಯವೆಂದು ತೋರಿಸಲೋಸುಗವೇ ಉದ್ಯಮ ಸ್ಥಾಪಿಸಿದ್ದೇವೆ ಎಂದರು. ಪ್ರಸಿದ್ಧ ಉದ್ಯಮ ಸಮೂಹದ ಮಾಲೀಕರುಗಳಾದ,ಶ್ರೀ ರಾಧೇಶ್ಯಾಮ ಗೋಯಂಕಾ, ಆನಂದ ರಾಠೀ, ಮಹಾಬೀರ್ ಪ್ರಸಾದ್ ಸೋನಿಕಾ ಮುಂತಾದವರು ಈ ಉದ್ಯಮದಲ್ಲಿ ಬಂಡವಾಳವನ್ನು ತೊಡಗಿಸಿದ್ದಾರೆ. ಕಂಪೆನಿಯನ್ನು ಲಾಭದ ಉದ್ದೇಶದಿಂದ ಸ್ಥಾಪಿಸಲಾಗಿಲ್ಲ. ಗೋ ಪರ ಬದುಕಿಗಾಗಿ ಪ್ರಾರಂಭಿಸಿದ್ದೇವೆ. ಇದರ ಲಾಭವನ್ನು ಶ್ರೀ ರಾಮಚಂದ್ರಾಪುರ ಮಠಕ್ಕೆ ಸಮರ್ಪಿಸಲಾಗುವುದೆಂದು ತಿಳಿಸಿದರು.

ನಂತರ ಮಾತನಾಡಿದ ಶ್ರೀ ಮೋಹನದಾಸ್ ಸ್ವಾಮೀಜಿ ಗೋ ಆರಾಧನೆಯಿಂದ ಮಾತ್ರ ಜಗತ್ತು ಉಳಿಯಲು ಸಾಧ್ಯ. ಜಗತ್ತೇ ಆರ್ಥಿಕ ಸಂಕಷ್ಟದ ಸುಳಿಯಲ್ಲಿ ಸಿಲುಕಿರುವಾಗ ದೇಶೀಯ ಗೋ ತಳಿಯ ರಕ್ಷಣೆಗೆ ನಿಂತಿರುವ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳ ಕಾರ್ಯ ಶ್ಲಾಘನೀಯ. ರಾಮ ಮಂದಿರವಿಲ್ಲವೆಂಬ ಕೊರಗು ಇರಬಹುದು. ಆದರೆ ಕಲಿಯುಗದಲ್ಲಿ ಗೋ ಸಂರಕ್ಷಣೆಯ ಕಾರ್ಯ ಮಾಡುತ್ತಿರುವ ಯುಗಪರಿವರ್ತಕ ರಾಘವೇಶ್ವರ ಭಾರತಿಗಳು ಆಧುನಿಕ ರಾಮ ಎಂದು ಬಣ್ಣಿಸಿದರು.

ಪರಮಪೂಜ್ಯರು ತಮ್ಮ ಆಶೀರ್ವಚನದಲ್ಲಿ ಗೋವು ಕೇವಲ ಪ್ರಾಣಿಯಲ್ಲ. ಅದು ಈ ದೇಶದ ಪ್ರಾಣ. ದೇಶ ಉಳಿಯಬೇಕಾದರೆ ಗೋ ಸಂಪತ್ತು ರಕ್ಷಣೆಯಾಗಲೇಬೇಕು.ದೇಶದಲ್ಲಿ ಮಿಶ್ರತಳಿಯ ರಾಸುಗಳ ಸಂಖ್ಯೆ ಹೆಚ್ಚುತ್ತಿದ್ದು ದೇಶೀಯ ಗೋ ತಳಿ ಅಳಿವಿನಂಚಿನಲ್ಲಿದೆ.ಹೀಗಾಗಿ ಶ್ರೀಮಠ ದೇಶೀಯ ತಳಿಗಳ ಕುರಿತಾದ ಸಂಶೋಧನೆ, ಅಭಿವೃದ್ಧಿ ಮತ್ತು ಗೋ ಉತ್ಪನ್ನಗಳ ತಯಾರಿಕೆಗೆ ಮುಂದಾಗಿದೆ.ಅವುಗಳ ಸಾಕಣೆ, ಆರ್ಥಿಕ ಲಾಭ ಏನೆಂಬುದನ್ನು ಪ್ರಯೋಗಾತ್ಮಕವಾಗಿ ಜನರಿಗೆ ತಿಳಿಸುವ ಸಲುವಾಗಿ ಈ ಗವ್ಯೋತ್ಪನ್ನ ಘಟಕ ಪ್ರಾರಂಭಿಸಲಾಗಿದೆ ಎಂದರು.

ಗೋವುಗಳನ್ನು ಭಾವನಾತ್ಮಕ ಹಾಗು ಆರ್ಥಿಕಾತ್ಮಕ ದೃಷ್ಟಿಯಿಂದ ನೋಡಬೇಕು. ಗೋ ಉತ್ಪನ್ನಗಳು ಅಪೂರ್ವ ಔಷಧೀಯ ಗುಣ ಹೊಂದಿದ್ದರೂ ಅವು ಜನಪ್ರೀಯಗೊಂಡಿಲ್ಲ ಎಂಬುದಕ್ಕೆ ಮಾರುಕಟ್ಟೆಯೇ ಮುಖ್ಯವಾದದ್ದು, ಇಂದಿನ ಮಾರುಕಟ್ಟೆ ಯುಗದಲ್ಲಿ ಉತ್ಪಾದಿತ ವಸ್ತುಗಳ ಪ್ರಯೋಜನದ ಪ್ರಚಾರ ಪ್ರಮುಖವಾದದ್ದು. ಕುಗ್ರಾಮಗಳಲ್ಲೂ ಬಹುರಾಷ್ಟ್ರೀಯ ಕಂಪೆನಿಗಳ ಉತ್ಪನ್ನಗಳು ಆಕರ್ಷಕ ಬಣ್ಣ, ವಿನ್ಯಾಸ, ಸುವಾಸನೆ, ಮತ್ತು ಪ್ರಚಾರದಿಂದ ಬೇರು ಮಟ್ಟದಲ್ಲಿ ಬಳಕೆಯಲ್ಲಿವೆ.ಈ ಹಿನ್ನೆಲೆಯಲ್ಲಿ ಇವೆಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗೋ ಉತ್ಪನ್ನಗಳ ಮಹತ್ವವನ್ನು ತಿಳಿಸಿ ಯಾವುದೇ ಅಡ್ಡ ಪರಿಣಾಮಗಳಿಲ್ಲದ ಇವುಗಳನ್ನು ಜನರು ಖರೀದಿಸುವಂತೆ ಪ್ರೇರಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಮಾ ಗೋ ಪ್ರಾಡಕ್ಟ್ಸ್ ಅರ್ಕ, ಫಿನಾಯಿಲ್, ಪ್ರಸಾಧನ ಸಾಮಗ್ರಿಗಳು ಸೇರಿದಂತೆ ಅನೇಕ ಗೃಹಬಳಕೆ ವಸ್ತುಗಳನ್ನು ಉತ್ಪಾದಿಸಲಿದೆ.ಈ ಉತ್ಪನ್ನಗಳ ತಯಾರಿಕೆಗೆ ಬೇಕಾದ ವಿದ್ಯುತ್ತನ್ನು ಘಟಕ ಸಗಣಿಯಿಂದಲೇ ಉತ್ಪಾದಿಸುತ್ತಿರುವುದು ವಿಶೇಷ. ನಂತರ ಹೊರಬರುವ ಸ್ಲರಿಯನ್ನು ಗೊಬ್ಬರವಾಗಿ ಬಳಸಲಾಗುವುದು.

### ವಿಶೇಷತೆಗಳು

ದೇಶದಲ್ಲೇ ಪ್ರಥಮ ಗೋ ಆಧಾರಿತ ಕಂಪೆನಿ.
ಘಟಕಕ್ಕೆ ಪ್ರತಿದಿನ ಬೇಕಾದ ಸುಮಾರು ೧೫ಕೆವಿ ವಿದ್ಯುತ್ತನ್ನು ಸಗಣಿಯಿಂದಲೇ ಉತ್ಪಾದನೆ.
ಗೋಮೂತ್ರಕ್ಕೆ ಲೀಟರ್‌ಗೆ ಐದು ರೂ, ಸಗಣಿ ಕೇಜಿಗೆ ೭೫ ಪೈಸೆ.
ಪ್ರತಿದಿನ ೨೦೦೦ ಕೇಜಿ ಸಗಣಿ, ೩೦೦ ಲೀ ಗೋಮೂತ್ರ ಘಟಕಕ್ಕೆ ಬೇಕು.
ಸಂಗ್ರಹಣೆ ಸುಲಭ; ಕೊಟ್ಟಿಗೆಯಲ್ಲೇ ಸಂಗ್ರಹಿಸಿಟ್ಟರೆ ಸಾಕು.

ಕಾರ್ಯಕ್ರಮದಲ್ಲಿ ಶ್ರೀ ವರ್ತೂರು ನಾರಾಯಣ ರೆಡ್ಡಿ ಅವರು ದೇಶೀತಳಿ ಗೋಸಂರಕ್ಷಣೆ, ಸಾವಯವ ಕೃಷಿಯ ಮಹತ್ವವನ್ನು ವಿವರಿಸಿದರು. ಮಾಣಿಲದ ಶ್ರೀ ರಮಾನಂದ ಸ್ವಾಮಿಗಳು ಮತ್ತು ಗದಗದ ಕಪ್ಪತಗುಡದ ಶ್ರೀ ಶಿವಕುಮಾರ ಸ್ವಾಮಿಗಳು ಉದ್ಯಮಕ್ಕೆ ಶುಭಹಾರೈಸಿ ಆಶೀರ್ವಾದ ಮಾಡಿದರು. ಮಾಜಿ ಮಂತ್ರಿಗಳೂ, ಶಾಸಕರೂ, ಮುಜರಾಯಿ ಮಂಡಳಿಯ ಅಧ್ಯಕ್ಷರೂ ಆದ ಶ್ರೀ ಕೃಷ್ಣಯ್ಯ ಶೆಟ್ಟರು ಉದ್ಯಮಕ್ಕೆ ನೆರವಿನ ಭರವಸೆ ನೀಡುತ್ತಾ, ಈ ಘಟಕ ತಯಾರಿಸುವ ಫೀನಾಯಿಲ್ ಅನ್ನು ಮುಜರಾಯಿ ದೇವಸ್ಥಾನಗಳು ಖರೀದಿಸುವಂತೆ ನಿರ್ದೇಶನ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಅವರ ತಂಡದ ಗೋಮುಖ ಎಂಬ ಕಿರು ಪ್ರಹಸನವನ್ನು ಆಯೋಜಿಸಲಾಗಿತ್ತು.

## ಗೋ ಗೀತೆ

ಮಗನೇ ನನ್ನ ನೀನು ಮಾರ ಬೇಡಪ್ಪಾ।
ನಿನ್ನ ಸೇವೆಗೆ ಜೀವ ಸವೆಸಿದೆ, ನನ್ನ ಪ್ರೀತಿಯ ನಿನಗೆ ನೀಡಿದೆ। ಮ॥

ಹೇರನೆಳೆಯಲು ಹೋರಿಯಾದೆ। ಉತ್ತು ಬಿತ್ತಲು ಎತ್ತು ಆದೆ।
ಹಾಲನುಣಿಸುವ ತಾಯಿಯಾದೆ, ಜೀವ ನೀಡುವ ವೈದ್ಯೆಯಾದೆ।
ಹಣದ ಆಸೆಗೆ ನನ್ನ ನೀನು, ಮಾರ ಬೇಡವೊ ಕಂದನೇ।
ಮಾರ ಬೇಡವೊ ಮಗನೆ ನೀನು, ನಿನ್ನ ಬೇಡಿಕೊಂಬೆನೊ। ಮ॥

ಪೈರಬೆಳೆಯಲು ಗೊಬ್ಬರವೀಯುವೆ, ರೋಗ ನೀಗಲು ಮೂತ್ರವೀಯುವೆ।
ಬುದ್ಧಿ ಬೆಳೆಯಲು ತುಪ್ಪವೀಯುವೆ, ಪಂಚಗವ್ಯದಿ ಶುದ್ಧಿ ನೀಡುವೆ।
ಸಾವಯವ ವ್ಯವಸಾಯ ನೀಡುವೆ, ಅಮೃತಾನ್ನವನೀಯುವೆ।
ಮಾರ ಬೇಡವೊ ಮಗನೆ ನೀನು, ನಿನ್ನ ಬೇಡಿಕೊಂಬೆನೊ। ಮ॥

ಹಂಡೆ ಹಂಡೆ ಹಾಲನೀಡುವೆ, ಬಂಡಿತುಂಬಾ ಪೈರ ನೀಡುವೆ।
ಹಣೆಗೆ ಭೂಷಣ ಭಸ್ಮವೀಯುವೆ, ಕಂದ ಕೃಷ್ಣಗೆ ಬೆಣ್ಣೆ ನೀಡುವೆ।
ಧನವ ನೀಡುವ ಧೇನುವಿನ ಈ ಋಣವ ತೀರಿಸೊ ಕಂದನೇ।
ಮಾರ ಬೇಡವೊ ಮಗನೆ ನೀನು, ನಿನ್ನ ಬೇಡಿಕೊಂಬೆನೊ। ಮ॥

ಅಲ್ಲಬೀರ್ನವ್ರ್ ಬರ್ತಾರಂತೆ, ಹಣದ ಚೀಲವ ತರ್ತಾರಂತೆ।
ಗೋಣು ಮುರಿದು ತೂಗ್ತಾರಂತೆ, ಕುದಿವ ನೀರ ಸರಿತಾರಂತೆ।
ಜೀವ ಜೀವ ನನ್ನ ತೊಗಲ ಕಿತ್ತು ಕಿತ್ತು ತೆಗಿತಾರಂತೆ।
ಮಾರ ಬೇಡವೊ ಮಗನೆ ನೀನು, ನಿನ್ನ ಬೇಡಿಕೊಂಬೆನೊ। ಮಗನೇ॥

– ಸತ್ಯನಾರಾಯಣ ಭಟ್

**ಗೋಕ್ಷೀರದಿಂದ ಆಯುರಾರೋಗ್ಯ ದೃಢಕಾಯ**
**ಕಾಯಬೇಕಾದ ನಾವೇ ಗೋವನ್ನು ಕೊಂದರೆ ಅದ್ಯಾವ ನ್ಯಾಯ?**